# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 111

ಸದಸ್ಯರ ಹೆಸರು : ಶ್ರೀ ಎಸ್ ನಾಗರಾಜ್(ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 10.07.2018

ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮೈಸೂರು-ಬೆಂಗಳೂರು ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಲಾಗಿದೆಯೇ; ಈ ಹೆದ್ದಾರಿಯನ್ನು ಆರು ಅಥವಾ ಎಂಟು ಪಥದ ರಸ್ತೆಯನ್ನಾಗಿ ಆಧುನಿಕ ಮಾದರಿಯಲ್ಲಿ ಅಗಲೀಕರಣ ಮಾಡಲು ಡಿ.ಪಿ.ಆರ್. (ವಿಸ್ತೃತ ಯೋಜನಾ ವರದಿ) ಅಂದಾಜು ಪಟ್ಟಿ ಅಂತಿಮವಾಗಿ ಸಿದ್ಧವಾಗಿದೆಯೇ; ಇವುಗಳಿಗೆ ಅನುಮೋದನೆ ದೊರಕಿದೆಯೇ; (ವಿವರ ಒದಗಿಸುವುದು) | ಬೆಂಗಳೂರಿನಿಂದ ಮೈಸೂರು ಬಂಟ್ವಾಳದವರೆಗೆ 376 ಕಿ.ಮೀ. ಉದ್ದದ ರಸ್ತೆಯು ರಾಷ್ಟ್ರೀಯ ಹೆದ್ದಾರಿ-275 ಎಂದು ದಿನಾಂಕ 04.03.2014ರಂದು ಘೋಷಿಸಲಾಗಿರುತ್ತದೆ. ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಸದರಿ ರಸ್ತೆಯ ಭಾಗವಾಗಿರುತ್ತದೆ.<br><br>ಬೆಂಗಳೂರಿನಿಂದ – ಮೈಸೂರುವರೆಗೆ ಹತ್ತು ಪಥಗಳನ್ನೊಳಗೊಂಡ ರಸ್ತೆಯನ್ನು ನಿರ್ಮಿಸಲು ಯೋಜನಾ ವರದಿ ಸಿದ್ಧವಾಗಿರುತ್ತದೆ. ಯೋಜನಾ ವರದಿಯು ನಿರ್ಬಂಧ/ತಡೆರಹಿತ ವಾಹನ ಸಂಚಾರಕ್ಕಾಗಿ (through traffic) ಆರು ಪಥದ ಹೆದ್ದಾರಿ (Access Controlled express way) ಹಾಗೂ ಗ್ರಾಮೀಣ ವಾಹನ ಸಂಚಾರಕ್ಕಾಗಿ ಹೆದ್ದಾರಿಯ ಎರಡೂ ಬದಿಗಳಲ್ಲಿ ಎರಡು ಪಥದ ಸೇವಾ ರಸ್ತೆಯನ್ನು ಒಳಗೊಂಡಿರುತ್ತದೆ. ಇದರಂತೆ ಸದರಿ ಕಾಮಗಾರಿಯನ್ನು ಬೆಂಗಳೂರಿನಿಂದ ಮೈಸೂರುವರೆವಿಗೂ ಅಭಿವೃದ್ಧಿಪಡಿಸಲು ಎರಡು ಪ್ಯಾಕೇಜ್ ಗಳನ್ನಾಗಿ ಈ ಕೆಳಗಿನಂತೆ ವಿಭಜಿಸಿದೆ.<br><br>1) Package-I ಬೆಂಗಳೂರು - ನಿಡಘಟ್ಟ ವಿಭಾಗ, ರಾಷ್ಟ್ರೀಯ ಹೆದ್ದಾರಿ 275ರ ಕಿ.ಮೀ. 18.00 ರಿಂದ 74.200 ಷಟ್ಪಥ ಕಾಮಗಾರಿಗೆ ರೂ.3501.00 ಕೋಟಿಗಳು ಹಾಗೂ<br><br>2) Package-II ನಿಡಘಟ್ಟ - ಮೈಸೂರು ವಿಭಾಗ ಕಿ.ಮೀ.74.200 ರಿಂದ 135.304 ಷಟ್ಪಥ ಕಾಮಗಾರಿಗೆ ರೂ.2919.81 ಕೋಟಿಗಳಿಗೆ ಕೇಂದ್ರ ಸರ್ಕಾರದ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯವು ಅನುಮೋದನೆ ನೀಡಿರುತ್ತದೆ. |
| ಆ | ಮೈಸೂರು-ಬೆಂಗಳೂರು ಹೆದ್ದಾರಿಯ ಅಗಲೀಕರಣ ಕಾರ್ಯ ಯಾವಾಗ ಆರಂಭವಾಗುವುದು; ಹಿಂದಿನ ಸರ್ಕಾರದಲ್ಲಿ ಈ ಕಾರ್ಯಾರಂಭಕ್ಕೆ ಲೋಕೋಪಯೋಗಿ ಸಚಿವರು ಚಾಲನೆ ನೀಡಿರುವರೇ; (ವಿವರ ಒದಗಿಸುವುದು) | ಮೈಸೂರು - ಬೆಂಗಳೂರು ಹೆದ್ದಾರಿಯ ಅಗಲೀಕರಣ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರ್ವಹಿಸಲಾಗುತ್ತಿದೆ.<br><br>ಸದರಿ ಕಾಮಗಾರಿಯನ್ನು ಎರಡು ಪ್ಯಾಕೇಜ್‌ಗಳಲ್ಲಿ ಮೆ.ದಿಲೀಪ್ ಬಿಲ್ಡ್ ಕಾನ್ ಲಿಮಿಟೆಡ್ ರವರಿಗೆ ದಿನಾಂಕ 28.02.2018ರಂದು ವಹಿಸಿಕೊಡಲಾಗಿದೆ. ಈ ಕಾಮಗಾರಿಗಳು ಸದ್ಯದಲ್ಲೇ ಪ್ರಾರಂಭಗೊಳ್ಳಲಿವೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ. |

| | | |
|---|---|---|
| ಇ | ಈ ಹೆದ್ದಾರಿ ವಿಸ್ತೀರ್ಣಕ್ಕೆ ಅಗತ್ಯವಾದ ಭೂಮಿ ಎಷ್ಟು; ಈ ಭೂಮಿಯನ್ನು ಗುರುತಿಸಲಾಗಿದೆಯೇ ಹಾಗೂ ಭೂಸ್ವಾಧೀನ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆಯೇ; ಇದುವರೆಗೆ ಎಷ್ಟು ಭೂಸ್ವಾಧೀನ ಪ್ರಕರಣಗಳಲ್ಲಿ ಕಾಯಿದೆ ಅನ್ವಯ ವಿವಿಧ ಹಂತದ ನೋಟಿಫಿಕೇಷನ್‌ಗಳನ್ನು ಹೊರಡಿಸಲಾಗಿದೆ; | ಪ್ಯಾಕೇಜ್ -1 ಕ್ಕೆ 348.76 ಹೆಕ್ಟೇರ್ ಭೂಮಿ ಬೇಕಾಗಿದ್ದು, ಅದರಲ್ಲಿ ಶೇಕಡ 76 ಷ್ಟು ಭೂಮಿಯನ್ನು ಹಾಗೂ ಪ್ಯಾಕೇಜ್ -2 ಕ್ಕೆ 376.69 ಹೆಕ್ಟೇರ್ ಭೂಮಿ ಬೇಕಾಗಿದ್ದು ಅದರಲ್ಲಿ ಶೇಕಡ 67ರಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಿಳಿಸಿದೆ.<br>ಸದರಿ ಎರಡೂ ಪ್ಯಾಕೇಜ್‌ಗಳಿಗೆ 3(a), 3(A) ಹಾಗೂ 3(D) ನೋಟಿಫಿಕೇಷನ್‌ಗಳು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರನ್ವಯ ಪ್ರಕಟಣೆಯಾಗಿದ್ದು, 3(G)ಯು ಪ್ರಗತಿಯಲ್ಲಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. ಉಳಿದ ಭೂಮಿ ಸ್ವಾಧೀನಕ್ಕಾಗಿ ಅವಾರ್ಡ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| ಈ | ಈ ಹೆದ್ದಾರಿಯಲ್ಲಿ ಎಲ್ಲೆಲ್ಲಿ ಬೈಪಾಸ್, ಗ್ರೇಡ್ ಸಪರೇಟರ್, ಮೇಲು ಸೇತುವೆ, ಕೆಳಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ? (ವಿವರ ಒದಗಿಸುವುದು) | ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಈ ಕೆಳಕಂಡ ನಗರ / ಪಟ್ಟಣಗಳಿಗೆ ಬೈಪಾಸ್ ರಸ್ತೆಯನ್ನು ನಿರ್ಮಿಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ.<br>**ಪ್ಯಾಕೇಜ್ - 1**<br>a) ಬೈಪಾಸ್ ಗಳು - ಬಿಡದಿ (7.0 ಕಿ.ಮೀ.) ರಾಮನಗರ ಮತ್ತು ಚನ್ನಪಟ್ಟಣ ಎರಡು ಪಟ್ಟಣಗಳಿಗೆ ಸೇರಿದಂತೆ ಒಂದು ಬೈಪಾಸ್ (22 ಕಿ.ಮೀ.)<br>b) ಬೃಹತ್ ಸೇತುವೆಗಳು - 4 ಸಂಖ್ಯೆ (0.625 ಕಿ.ಮೀ)<br>c) ಕಿರು ಸೇತುವೆಗಳು - 17 ಸಂಖ್ಯೆ<br>d) ರಸ್ತೆ ಮೇಲ್ಸೇತುವೆ - 02 ಸಂಖ್ಯೆ<br>e) ಸುರಂಗ ಮಾರ್ಗಗಳು (ಗ್ರೇಡ್ ಸಪರೇಟರ್)- 25 ಸಂಖ್ಯೆ. ವಿಯುಪಿ/ ಪಿಓಪಿ<br>f) ಪಾದಚಾರಿಗಳ ಸುರಂಗ ಮಾರ್ಗ- 06 ಸಂಖ್ಯೆ<br>**ಪ್ಯಾಕೇಜ್ - 2**<br>a) ಬೈಪಾಸ್ ಗಳು - ಮದ್ದೂರು (4.45 ಕಿ.ಮೀ.) ಮಂಡ್ಯ (10.04 ಕಿ.ಮೀ.) ಮತ್ತು ಶ್ರೀರಂಗಪಟ್ಟಣ (8.19 ಕಿ.ಮೀ)<br>b) ಬೃಹತ್ ಸೇತುವೆಗಳು - 5 ಸಂಖ್ಯೆ (0.925 ಕಿ.ಮೀ)<br>c) ಕಿರು ಸೇತುವೆಗಳು - 27 ಸಂಖ್ಯೆ<br>d) ರಸ್ತೆ ಮೇಲ್ಸೇತುವೆ - 02 ಸಂಖ್ಯೆ |

ಸಂಖ್ಯೆ: ಲೋಇ 203 ಸಿಎನ್‌ಹೆಚ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು